**9 ನೇ ಭಾರತ-ಚಿಲಿ ವಿದೇಶಾಂಗ ಕಚೇರಿ ಸಮಾಲೋಚನೆಗಳು**

ನವೆಂಬರ್ 11, 2025

2025 ನವೆಂಬರ್ 10 ರಂದು ಸ್ಯಾಂಟಿಯಾಗೋದಲ್ಲಿ ನಡೆಸಲಾದ 9 ನೇ ಭಾರತ-ಚಿಲಿ ವಿದೇಶಾಂಗ ಕಚೇರಿ ಸಮಾಲೋಚನೆಗಳ (FOC) ಸಭೆಯ ಸಹ-ಅಧ್ಯಕ್ಷತೆಯನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ (ಪೂರ್ವ) ಶ್ರೀ ಪಿ. ಕುಮಾರನ್, ಮತ್ತು ಚಿಲಿ ಗಣರಾಜ್ಯದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪ್ರಧಾನ ಕಾರ್ಯದರ್ಶಿ, ರಾಯಭಾರಿ ರೊಡ್ರಿಗೋ ಓಲ್ಸೆನ್ ಜಂಟಿಯಾಗಿ ವಹಿಸಿಕೊಂಡಿದ್ದರು. 2025 ಏಪ್ರಿಲ್ 1-5 ರವರೆಗೆ ಭಾರತಕ್ಕೆ ಚಿಲಿ ಅಧ್ಯಕ್ಷರ ಅಧಿಕೃತ ಭೇಟಿಯ ನಂತರದಲ್ಲಿ ನಡೆದ ಈ ಸಮಾಲೋಚನೆಗಳು ದ್ವಿಪಕ್ಷೀಯ ಸಂಬಂಧಗಳ ಸಂಪೂರ್ಣ ಶ್ರೇಣಿಯನ್ನು ಪರಿಶೀಲಿಸಲು ಅವಕಾಶವನ್ನು ಒದಗಿಸಿದವು.

2. FOC ಸಮಯದಲ್ಲಿ, ಎರಡೂ ಕಡೆಯವರು 2025 ಏಪ್ರಿಲ್‌ನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಅಧ್ಯಕ್ಷ ಬೋರಿಕ್ ನಡುವೆ ಚರ್ಚಿಸಲಾದ ವಿಷಯಗಳಲ್ಲಾಗಿರುವ ಪ್ರಗತಿಯನ್ನು ಪರಿಶೀಲಿಸಿದರು, ಇದರಲ್ಲಿ ಎರಡು ದೇಶಗಳ ನಡುವೆ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ (CEPA) ದ ಆರಂಭಿಕ ತೀರ್ಮಾನಕ್ಕಾಗಿ ನಡೆಯುತ್ತಿರುವ ಮಾತುಕತೆಗಳನ್ನು ತ್ವರಿತಗೊಳಿಸುವುದು ಸೇರಿದೆ. ವ್ಯಾಪಾರ, ಹೂಡಿಕೆ, ಸಂಪರ್ಕ, ಆರೋಗ್ಯ ಮತ್ತು ಔಷಧಿಗಳು, ಸಾಂಪ್ರದಾಯಿಕ ಔಷಧಿಗಳು, ವಿಜ್ಞಾನ ಮತ್ತು ತಂತ್ರಜ್ಞಾನ, ಗಣಿಗಾರಿಕೆ ಮತ್ತು ಖನಿಜ ಪರಿಶೋಧನೆ, ರಕ್ಷಣೆ, ನಾಗರಿಕ ಪರಮಾಣು ತಂತ್ರಜ್ಞಾನಗಳು, ಶಿಕ್ಷಣ, ಬಾಹ್ಯಾಕಾಶ, ಕೃಷಿ ಮತ್ತು ಜನರ ನಡುವಿನ ವಿನಿಮಯ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಸಹಕಾರವನ್ನು ಮತ್ತಷ್ಟು ಬಲಪಡಿಸಲು ಭಾರತ ಮತ್ತು ಚಿಲಿ ಒಪ್ಪಿಕೊಂಡವು. ಖನಿಜ ಸಂಪನ್ಮೂಲಗಳ ಪೂರೈಕೆಗಾಗಿ ದೀರ್ಘಾವಧಿಯ ಒಪ್ಪಂದಗಳನ್ನು ಪರಿಗಣಿಸಲು ಭಾರತ ಚಿಲಿಯನ್ನು ಕೋರಿತು.

3. ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ, ನಾವೀನ್ಯತೆ ಮತ್ತು ಹಸಿರು ಇಂಧನದಂತಹ ಸಮಕಾಲೀನ ಪ್ರಸಕ್ತತೆಯ ಹೊಸ ಮತ್ತು ಉದಯೋನ್ಮುಖ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಂಬಂಧಗಳನ್ನು ವೈವಿಧ್ಯಗೊಳಿಸಲು ಎರಡೂ ಕಡೆಯವರು ಒಪ್ಪಿಕೊಂಡರು. ಭಾರತೀಯ ವೃತ್ತಿಪರರು ಮತ್ತು ಬಿಸಿನೆಸ್ ಸಂದರ್ಶಕರಿಗೆ ವೀಸಾಗಳನ್ನು ಸುಲಭಗೊಳಿಸುವ ವಿಷಯಗಳ ಬಗ್ಗೆ ಕೂಡ ಚರ್ಚಿಸಲಾಯಿತು, ವಿಶೇಷವಾಗಿ 2025 ಏಪ್ರಿಲ್‌ನಲ್ಲಿ ಅಧ್ಯಕ್ಷ ಬೋರಿಕ್ ಘೋಷಿಸಿದಂತೆ ಉದ್ಯಮಿಗಳು ಮತ್ತು ವೃತ್ತಿಪರರಿಗೆ ಬಹು ಪ್ರವೇಶ ವೀಸಾವನ್ನು ಪ್ರಾರಂಭಿಸುವುದರ ಬಗ್ಗೆ ಚರ್ಚೆಗಳು ನಡೆದವು.

4. ದ್ವಿಪಕ್ಷೀಯ ಸಂಬಂಧಗಳನ್ನು ವೈವಿಧ್ಯಗೊಳಿಸಲು ಮತ್ತು ಬಲಪಡಿಸಲು, ಕಸ್ಟಮ್ಸ್ ವಿಷಯಗಳಲ್ಲಿ ಸಹಕಾರ, ಭಾರತೀಯ ಔಷಧಶಾಸ್ತ್ರದ ಮಾನ್ಯತೆ, ಸಾಂಪ್ರದಾಯಿಕ ಔಷಧಿಗಳು ಮತ್ತು ಯೋಗದಲ್ಲಿ ಸಹಕಾರ, ಸಾಮಾಜಿಕ ಭದ್ರತಾ ಒಪ್ಪಂದ, ಬಾಹ್ಯಾಕಾಶ ವಲಯದಲ್ಲಿ ಸಹಕಾರ, ಭದ್ರತೆ, ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತರಬೇತಿ ಮತ್ತು ಸಾಮರ್ಥ್ಯ ವರ್ಧನೆ ಮತ್ತು ಜನರ ನಡುವಿನ ಸಂಪರ್ಕವನ್ನು ಹೆಚ್ಚಿಸಲು ವೀಸಾ ಸಂಬಂಧಿತ ವಿಷಯಗಳು ಸೇರಿದಂತೆ ಪರಿಗಣಿಸಲಾಗುತ್ತಿರುವ ಒಪ್ಪಂದಗಳನ್ನು ಅಂತಿಮಗೊಳಿಸಲು ಪ್ರತಿಕ್ರಿಯೆಗಳನ್ನು ತ್ವರಿತಗೊಳಿಸಲು ಎರಡೂ ಕಡೆಯವರು ಒಪ್ಪಿಕೊಂಡರು.

5. ಪರಸ್ಪರ ಹಿತಾಸಕ್ತಿಯ ವಿಷಯಗಳ ಬಗ್ಗೆ ಬಹುಪಕ್ಷೀಯ ವೇದಿಕೆಗಳಲ್ಲಿ ನಿಕಟವಾಗಿ ಸಮನ್ವಯ ಸಾಧಿಸಲು ಎರಡೂ ಕಡೆಯವರು ಒಪ್ಪಿಕೊಂಡರು. ಚಿಲಿ ಇತ್ತೀಚೆಗೆ ಅಂತಾರಾಷ್ಟ್ರೀಯ ಸೌರ ಮೈತ್ರಿಕೂಟದ LAC ಪ್ರಾದೇಶಿಕ ಸಮ್ಮೇಳನವನ್ನು ಆಯೋಜಿಸಿತ್ತು ಹಾಗೂ ಭಾರತ ಮತ್ತು ಚಿಲಿ ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸಹಕಾರ, ತಂತ್ರಜ್ಞಾನ ಹಂಚಿಕೆ ಮತ್ತು ಹೂಡಿಕೆಗಳ ಕುರಿತು ಚರ್ಚಿಸಿದವು.

6. ಮುಂದಿನ ಸುತ್ತಿನ ವಿದೇಶಾಂಗ ಕಚೇರಿ ಸಮಾಲೋಚನೆಗಳನ್ನು ಪರಸ್ಪರ ಅನುಕೂಲಕರ ದಿನಾಂಕದಂದು ನವದೆಹಲಿಯಲ್ಲಿ ನಡೆಸಲು ಒಪ್ಪಿಕೊಳ್ಳಲಾಯಿತು.

ಸ್ಯಾಂಟಿಯಾಗೋ

ನವೆಂಬರ್ 10, 2025